1	2	3	4	5
ಮಂಡ್ಯ	ಮಳವಳ್ಳಿ	64	ಕಿರುಗಾವಲು	167
		65	ಬಾಚನಹಳ್ಳಿ	193
	ಮಂಡ್ಯ	66	ತಂಗಳಗೆರೆ	196
	ನಾಗಮಂಗಲ	67	ಕೋಟೆಬೆಟ್ಟ	170
	ಶ್ರೀರಂಗಪಟ್ಟಣ	68	ಶ್ರೀರಂಗಪಟ್ಟಣ(ನ)	184
ಮೈಸೂರು	ಮೈಸೂರು	69	ದೊಡ್ಡಹುಂಡಿ	229
	ನಂಜನಗೂಡು	70	ಎಸ್. ಹೊಸಕೋಟೆ	145
ರಾಯಚೂರು	ದೇವದುರ್ಗ	71	ಜಾಲಹಳ್ಳಿ	224
	ಲಿಂಗಸಗೂರು	72	ಅಡವಿಬಾವಿ	209
	ರಾಯಚೂರು	73	ರಾಯಚೂರು(ನ)	265
ಶಿವಮೊಗ್ಗ	ಭದ್ರಾವತಿ	74	ಅನವೇರಿ	158
	ಶಿಕಾರಿಪುರ	75	ಶಿರಾಳಕೊಪ್ಪ	141
	ಶಿವಮೊಗ್ಗ	76	ಶಿವಮೊಗ್ಗ	130
ತುಮಕೂರು	ಮಧುಗಿರಿ	77	ಬೇಡತ್ತೂರು	203
ಉಡುಪಿ	ಉಡುಪಿ	78	ಬ್ರಹ್ಮಾವರ	88
ಉತ್ತರ ಕನ್ನಡ	ಮುಂಡಗೋಡ	79	ಮುಂಡಗೋಡು	133
	ಯಲ್ಲಾಪುರ	80	ಮಾಗೋಡು ಫಾಲ್ಸ್	133
			ಒಟ್ಟು	**15037**

ಕೃಷಿ ಯಾಂತ್ರೀಕರಣ

4202 (4955) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿಯನ್ನು ಯಾಂತ್ರಿಕರಣಗೊಳಿಸುವ ಅನಿವಾರ್ಯತೆ ಹಾಗೂ ಅವಶ್ಯಕತೆಯನ್ನು ಸರ್ಕಾರವು ಮನಗಂಡಿದೆಯೇ?

ಆ) ಹಾಗಿದ್ದಲ್ಲಿ ಈ ದಿಸೆಯಲ್ಲಿ ಕೈಗೊಂಡಿರುವ ಕ್ರಮಗಳೇನು?

ಇ) ಈ ಬಗ್ಗೆ ವಿಶೇಷ ಕಾರ್ಯಕ್ರಮವೇನಾದರೂ ರೂಪಿತವಾಗಿದ್ದಲ್ಲಿ ಅದರ ವಿವರಗಳೇನು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಹೌದು.

ಆ) ಕೃಷಿ ಯಾಂತ್ರೀಕರಣವನ್ನು ಅಳವಡಿಸಲು ಇಲಾಖಾವತಿಯಿಂದ ಕೇಂದ್ರ ಪುರಸ್ಕೃತ ಯೋಜನೆ ಮತ್ತು ರಾಜ್ಯ ವಲಯ ಯೋಜನೆಗಳಡಿಯಲ್ಲಿ ಹೈಟೆಕ್ ಕೃಷಿ ಯಂತ್ರೋಪಕರಣ, ಸಣ್ಣ ಟ್ರ್ಯಾಕ್ಟರ್, ಪವರ್ ಟಿಲ್ಲರ್, ನವೀನ ಕೃಷಿ ಯಂತ್ರೋಪಕರಣಗಳು ಟ್ರ್ಯಾಕ್ಟರ್ ಚಾಲಿತ ಸಸ್ಯ

ಸಂರಕ್ಷಣಾ ಉಪಕರಣಗಳು, ಹನಿ ಮತ್ತು ತುಂತುರು ನೀರಾವರಿ ಘಟಕಗಳು ಹಗೂ ಸೋಲಾರ್ ಪಂಪು ಸೆಟ್ಟುಗಳನ್ನು ಪಡೆಯಲು ಸಹಾಯ ಸೌಲಭ್ಯವನ್ನು ಎಲ್ಲಾ ವರ್ಗದ ರೈತರಿಗೆ ನೀಡಲಾಗುತ್ತಿದೆ.

ಆ) 2003–04ನೇ ಸಾಲಿಗೆ ಕೃಷಿ ಯಾಂತ್ರೀಕರಣ ಅಭಿವೃದ್ಧಿಗಾಗಿ ಮೂರು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

1. ವಿಸ್ತೃತ ನಿರ್ವಹಣಾ ಮಾದರಿಯಡಿಯಲ್ಲಿ ಕೃಷಿ ಅಭಿವೃದ್ಧಿಗಾಗಿ ಕೃಷಿ ಯಾಂತ್ರೀಕರಣ ಯೋಜನೆಯನ್ನು ರೂ. 313.00 ಲಕ್ಷಗಳ ಶೇ. 25 ಸಹಾಯಧನದೊಂದಿಗೆ ಅನುಷ್ಠಾನಗೊಳಿಸಲು ಕಾರ್ಯಕ್ರಮ ರೂಪಿಸಲಾಗಿದೆ.
2. ರಾಜ್ಯ ವಲಯದಲ್ಲಿ ಕೃಷಿ ಯಾಂತ್ರೀಕರಣ ಯೋಜನೆಯನ್ನು ರೂ. 225.00 ಲಕ್ಷಗಳ ಸಹಾಯಧನದೊಂದಿಗೆ ಅಂಶ–1 ರಲ್ಲಿಯ ಕಾರ್ಯಕ್ರಮಕ್ಕೆ ಪೂರಕವಾಗಿ ಒಟ್ಟಾರೆ ಶೇ. 50 ಸಹಾಯಧನ ಒದಗಿಸಲು ಕಾರ್ಯಕ್ರಮ ರೂಪಿಸಲಗುತ್ತಿದೆ.
3. ರಾಜ್ಯ ವಲಯದಲ್ಲಿ ಹನಿ ನೀರಾವರಿ ಯೋಜನೆಯನ್ನು ರೂ. 1000 ಲಕ್ಷಗಳ ಅನುದಾನದೊಂದಿಗೆ ಅನುಷ್ಠಾನಗೊಳಿಸಲು ಕಾರ್ಯಕ್ರಮವನ್ನು ರೂಪಿಸಲಾಗುತ್ತಿದೆ.

ಬೆಂಗಳೂರಿನ ಹನುಮಂತನಗರದಲ್ಲಿ ಒಳಾಂಗಣ ಕ್ರೀಡಾಂಗಣ ಯೋಜನೆ

4335 (4500) : ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) ಮಾನ್ಯ ಮುಖ್ಯಮಂತ್ರಿಯವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹನುಮಂತನಗರ ವಾರ್ಡ್ ಸಂ. 52 ಬೃಂದಾವನ ನಗರದಲ್ಲಿ ಒಳಾಂಗಣ ಕ್ರೀಡಾಂಗಣವನ್ನು ಆರಂಭಿಸುವ ಮುನ್ನ ಫಿಜಿಬಿಲಿಟಿ ರಿಪೋರ್ಟ್ ಪಡೆಯಲಾಗಿತ್ತಾ?

ಆ) ಈ ಕ್ರೀಡಾಂಗಣದ ಪ್ರಾಜೆಕ್ಟ್ ರಿಪೋರ್ಟ್ ಸಿದ್ಧಪಡಿಸಲಾಗಿತ್ತೆ. ಈ ಕಾಮಗಾರಿಗಳಿಗೆ ತಗಲುವ ವೆಚ್ಚವೆಷ್ಟು? ಆಗಿರುವ ವೆಚ್ಚವೆಷ್ಟು? ಅಂದಾಜು ಮಾಡಿದ್ದ ಮೊತ್ತವೆಷ್ಟು?

ಇ) ಈ ಕಾಮಗಾರಿಯನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರು ಯಾರು? ಸದರಿ ಕಾರ್ಯದ ಅನುಭವ ಈ ಗುತ್ತಿಗೆದಾರರಿಗೆ ಇದೆಯೇ? ವಿವರಿಸುವುದು:

ಈ) ಕಾಮಗಾರಿಗಾಗಿ ಗುತ್ತಿಗೆ ನೀಡುವಾಗ ಸಮಯ ನಿಗಧಿ ಮಾಡಿದ್ದೆಷ್ಟು? ಆಗಿರುವ ಅವಧಿ ಎಷ್ಟು?

ಉ) ಕ್ರೀಡಾಂಗಣ ನಿರ್ಮಾಣ ನಂತರ ಇದರ ಉಪಯೋಗಕ್ಕೆ ಯೋಜನೆ ರೂಪಿಸಲಗಿದೆಯೇ?

ಊ) ಕಟ್ಟಡವನ್ನು ಸುಸ್ಥಿತಿಯಲ್ಲಿಡಲು ಅಂದಾಜು ವೆಚ್ಚ ಮಾಲಾಗಿದೆಯೇ? ವಿವರಿಸುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)

ಅ) ಹೌದು.

ಆ) ಈ ಕ್ರೀಡಾಂಗಣದ ಪ್ರಾಜೆಕ್ಟ್ ರಿಪೋರ್ಟ್ ಸಿದ್ಧಪಡಿಸಲಾಗಿತ್ತು. ಈ ಕಾಮಗಾರಿಗೆ ತಗಲುವ ವೆಚ್ಚ ಟೆಂಡರು ಪ್ರೀಮಿಯಂ ಸೇರಿ ರೂ. 1463.32 ಲಕ್ಷಗಳು. ಈವರೆವಿಗೂ ಆಗಿರುವ ವೆಚ್ಚ ರೂ. 757.54 ಲಕ್ಷಗಳು. ಈ ಕೆಲಸದ ಅಂದಾಜು ಮೊತ್ತ ರೂ. 1000.00 ಲಕ್ಷಗಳು

ಇ) ಈ ಕಾಮಗಾರಿ ನಿರ್ವಹಿಸುತ್ತಿರುವ ಗುತ್ತಿಗೆದಾರರು ಶ್ರೀ ಮುನಿವೆಂಕಟಪ್ಪ ಎಂಬುದು 1ನೇ ದರ್ಜೆ ಗುತ್ತಿಗೆದಾರರು. ಸದರಿ ಕಾಮಗಾರಿಯ ಕಾರ್ಯದ ಅನುಭವ ಈ ಗುತ್ತಿಗೆದಾರರಿಗೆ